ಓ.ಎಸ್. ನಂಃ **25/2019**
<u>ಡಿಡಬ್ಲ್ಯೂಃ **2**</u>

ದಿನಾಂಕಃ 17-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಗೆ ಹಿಂದಿ ಭಾಷೆ ಬರುತ್ತದೆ ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳಿದ ಮೇರೆಗೆ ಶ್ರೀ ಆರ್.ಸಿ.ಎಸ್ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಲಾಯಿತು ಹಾಗೂ ಅವರಿಗೆ ಪ್ರಮಾಣ ವಚನ ಭೊದಿಸಲಾಯಿತು.

<u>ಪಾಟೀ ಸವಾಲುಃ ವಾದಿಯರ ಪರ ಶ್ರೀ ಜಿ ಎಸ್ ಎನ್ ವಕೀಲರಿಂದಃ</u>

ಈ ದಾವೆಯನ್ನು ಸಾಹೇಬ್ ಬಿ ರವರು ಗೌಸುದ್ದೀನ್ ರವರ ವಿರುದ್ಧ ದಾಖಲಿಸಿದ್ದಾರೆ. ಮನೆಗೆ ಸಂಬಂಧಿಸಿದಂತೆ ದಾವೆ ದಾಖಲಿಸಿದ್ದಾರೆ. ನಾನು ಯಾದಗಿರಿಯಲ್ಲಿ 1 ನೇ ಪ್ರತಿವಾದಿಯ ಮನೆಯ ಪಕ್ಕದಲ್ಲಿ ವಾಸವಾಗಿದ್ದೇನೆ. ನಿಮಗೆ ಮೊಹ್ಮದ್ ಯಾಕುಬ್ ಸಾಬ್ ರವರ ಪರಿಚಯ ಇದೆಯೇ ಎಂದರೆ ಸಾಕ್ಷಿಯು ಆತ ಸಂಬಂಧದಲ್ಲಿ ನನ್ನ ಸಹೋದರ ಆಗಿರುತ್ತಾನೆ ಎಂದು ನುಡಿಯುತ್ತಾರೆ. ಆತನ ಮಗ ಅಫ್ಸರ್ ಮಿಯಾ ರವರ ಪರಿಚಯ ಇದೆ. ಅಫ್ಸರ್ ಮಿಯಾ ರವರು ಯಾಕುಬ್ ಸಾಬ್ ರವರ ಹಿರಿಯ ಮಗ ಆಗಿದ್ದರು. ಯಾಕುಬ್ ಸಾಬ್ ರವರು ಮರಣಹೊಂದಿರುತ್ತಾರೆ ಎಂದರೆ ಸರಿ. ಆತ 1990 ರಲ್ಲಿ ಮರಣಹೊಂದಿರುತ್ತಾರೆ.

2. ನನಗೆ ಕನ್ನಡ ಭಾಷೆ ಓದಲು ಬರುವುದಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ರಂಜಾನ್ ಹಬ್ಬಕ್ಕೆ ನಿಮ್ಮನ್ನು ಯಾರು ಕರೆಸಿದ್ದರು ಎಂದರೆ ಸಾಕ್ಷಿಯು ಯಾರು ಕರೆಸಿರಲಿಲ್ಲ ಆದರೆ ಆ ಸಮಯದಲ್ಲಿ ಯಾಕುಬ್ ಸಾಬ್ ರವರು ಗೌಸುದ್ದೀನ್ ರವರಿಗೆ ಕೋಣೆ (ರೂಮ್) ನೀಡಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು, ಯಾಕುಬ್ ಸಾಬ್ ಹಾಗೂ ಗೌಸುದ್ದೀನ್ ಮತ್ತು ಇತರೆ 2-3 ಜನ ಹಾಜರಿದ್ದೆವು. ಸದರಿ 2-3 ಜನರ ಹೆಸರುಗಳು ನನಗೆ ನೆನಪಿಲ್ಲ. ಆ ದಿನ ಮಃ 02.00 ಗಂಟೆ ಸುಮಾರಿಗೆ ನಾನು ಯಾಕುಬ್ ಸಾಬ್ ರವರ ಮನೆಗೆ ಹೋಗಿದ್ದೆನು. ಸುಮಾರು ಅರ್ಧ ಗಂಟೆ ವರೆಗೆ ನಾನು ಅವರ ಮನೆಯಲ್ಲಿ ಇದ್ದೆನು. ನೀವು ರಂಜಾನ್ ಸಮಯದಲ್ಲಿ ಸಾಮಾನ್ಯವಾಗಿ ಬೆಃ 11 ರಿಂದ ಮದ್ಯಾಹ್ನದ ವರೆಗೆ ಪಾರ್ಥನೆ ಮಾಡಲು ಈದ್ಗಾ ಮೈದಾನಕ್ಕೆ

ಹೋಗುತ್ತೀರಿ ಎಂದರೆ ಸಾಕ್ಷಿಯು ಪಾರ್ಥನೆ ಬೆಃ 11 ಗಂಟೆಗೆ ಮುಗಿದು ಹೋಗುತ್ತದೆ ಎಂದು ನುಡಿಯುತ್ತಾರೆ. ಯಾಕುಬ್ ಸಾಬ್ ರವರು ಸ್ವತಃ ಕೋಣೆಯನ್ನು ಗೌಸುದ್ದೀನ್ ರವರಿಗೆ ನೀಡಿದ್ದರು. ಯಾವ ಕಾರಣಕ್ಕೆ ಗೌಸುದ್ದೀನ್ ರವರಿಗೆ ಕೋಣೆ ನೀಡಿದ್ದರು ಎಂದರೆ ಸಾಕ್ಷಿಯು ವಾಸವಾಗಿರಲು ಕೊಟ್ಟಿದ್ದರು ಎಂದು ನುಡಿಯುತ್ತಾರೆ.

3. ದಿನಾಂಕ 18.05.1988 ರಂದು ರಂಜಾನ್ ಹಬ್ಬ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಆ ವರ್ಷದ ರಂಜಾನ್ ಹಬ್ಬದ ನಿಖರ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ವರ್ಷದ ರಂಜಾನ್ ಹಬ್ಬ ವಾರದ ಯಾವ ದಿನ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ದಿನಾಂಕ 17.04.1988 ರಂದು ರಂಜಾನ್ ಹಬ್ಬ ಇತ್ತು ಎಂದರೆ ಸಾಕ್ಷಿಯು ಇರಬಹದು ಎಂದು ನುಡಿಯುತ್ತಾರೆ. ನಿಮಗೆ ಯಾಕುಬ್ ಸಾಬ್ ಹಾಗೂ ಅವರ ಕುಟುಂಬದವರ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಕುಟುಂಬ ಸದಸ್ಯರ ಬಗ್ಗೆ ಮಾಹಿತಿ ಇದೆ ಆದರೆ ಅವರ ಕುಟುಂಬದ ಒಳ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಯಾಕುಬ್ ಸಾಬ್ ರವರು ಗೌಸುದ್ದೀನ್ ರವರಿಗೆ ಕೋಣೆ ನೀಡಿದ್ದಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 30 ವರ್ಷಗಳಿಂದ ಗೌಸುದ್ದೀನ್ ರವರು ಅದೇ ಕೋಣೆಯಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ವಾದಿಯರಿಗೆ ಪಾಲು ಸಿಗಬಾರದು ಎಂಬ ಉದ್ದೇಶದಿಂದ ನಾನು ಪ್ರತಿವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ **ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ